O.S **66/2025**

P.W.1

ಸಾಕ್ಷಿಯನ್ನು ದಿಃ 28-04-2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಬಿ.ವಿ.ಪಿ. ವಕೀಲರಿಂದ ವಾದಿ ಪರವಾಗಿ:-**

ನಾನು ಹಾಜರುಪಡಿಸಿರುವ ದಾಖಲೆಗಳನ್ನು ನೋಡುತ್ತಿದ್ದು, ಅವುಗಳಲ್ಲಿ ದಿ.24.11.2021 ರ ಸಾಲದ ಅರ್ಜಿ, ಮಂಜೂರಾತಿ ಪತ್ರ, ಸಾಲದ ಒಪ್ಪಂದ ಪತ್ರ, ಜಾಮೀನುದಾರರ ಪತ್ರ ಕ್ರಮವಾಗಿ ನಿಪಿ.1 ರಿಂದ 4 ಎಂದು, ಅಡಮಾನ ಪತ್ರವನ್ನು ನಿಪಿ-5 ಎಂದು, ಮೂರು ಪಹಣಿ ಪತ್ರಿಕೆಗಳನ್ನು ಕ್ರಮವಾಗಿ ನಿಪಿ-6 ರಿಂದ 8 ಎಂದು, ದಿನಾಂಕಃ 01.07.2024 ರ ಕಾನೂನು ಸೂಚನಾ ಪತ್ರವನ್ನು ಕಚೇರಿ ಪ್ರತಿಯನ್ನು ನಿಪಿ.-9 ಎಂದು, ಎರಡು ಅಂಚೆ ಲಕೋಟೆಗಳನ್ನು ಅದನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ನೋಡಲಾಗಿ ಕ್ರಮವಾಗಿ ನಿಪಿ-10 ಮತ್ತು 11, ಅದರೊಳಗಿರುವ ಕಾನೂನು ಸೂಚನಾ ಪತ್ರಗಳನ್ನು ಕ್ರಮವಾಗಿ ನಿಪಿ10 ಎ ಮತ್ತು 11 ಎ, ಪ್ರತಿವಾದಿಯ ಖಾತೆಯ ಸ್ಟೇಟಮೆಂಟಿನ ಪ್ರತಿಯನ್ನು ನಿಪಿ.12 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಪ್ರತಿವಾದಿಗಳು ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

sd/-28.04.2026

ಹಿರಿಯ ದಿವಾಣಿ ನ್ಯಾಯಾಧೀಶರು

ಸಾಕ್ಷಿದಾರರ ಸಹಿಃ sd/-

ಹಾಗೂ ಪ್ರ.ದ.ನ್ಯಾದಂ. ಲಕ್ಷ್ಮೇಶ್ವರ